ಕರ್ನಾಟಕ ವಿಧಾನ ಸಭೆ

ಗುರುವಾರ ದಿನಾಂಕ: 6ನೇ ಏಪ್ರಿಲ್ 2006 ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10 ಗಂಟೆ 28 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಕ್ವಶ್ಚನ್ ಅವರ್ ತೆಗೆದುಕೊಂಡು ಬಿಡಿ ಸರ್. ಬಿಲ್‌ನವರು ಯಾರು ಇಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಜೀರೊ ಅವರ್ ಆಗಿ ಬಿಡಲಿ.

ಶ್ರೀ ಜಗದೀಶ್ ಶೆಟ್ಟರ್ : ಇಂಟ್ರಡಕ್ಷನ್ ಮಾಡುವುದಕ್ಕೆ ಮಾನ್ಯ ಉದಾಸಿಯವರು ಇದ್ದಾರೆ.

ಅಧ್ಯಕ್ಷರು : ನೋಡಿ ಮಾನ್ಯ ಖರ್ಗೆಯವರೆ, ಕಾರ್ಯಕ್ರಮ ಪಟ್ಟಿಯಲ್ಲಿ ಮೊದಲು ವಿಧೇಯಕಗಳನ್ನು ಹಾಕಿ ಬಿಟ್ಟಿದ್ದೇವೆ. ಅದು ಆದ ಮೇಲೆ ಪ್ರಶ್ನೋತ್ತರ ತೆಗೆದುಕೊಳ್ಳೋಣ. ಜೀರೊ ಅವರ್ ಕೂಡ ಇರುತ್ತದೆ.

1. ಚುನಾವಣೆಯ ಪ್ರಸ್ತಾವ.

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು): ದಿನಾಂಕ: 4–4–2006 ರಂದು ರಾಜ್ಯ ಗ್ರಂಥಾಲಯ ಪ್ರಾಧಿಕಾರಕ್ಕೆ ಚುನಾವಣೆಯ ಪ್ರಸ್ತಾಪವನ್ನು ಮಂಡಿಸಿದ್ದು, ಚುನಾವಣೆ ಕಾರ್ಯಕ್ರಮಗಳ ವೇಳಾಪಟ್ಟಿಯನ್ನು ಹೊರಡಿಸಲಾಗಿರುತ್ತದೆ. ಆದರೆ ಈ ದಿನ ಅಧಿವೇಶನ ಮುಕ್ತಾಯಗೊಳ್ಳುತ್ತಿರುವುದರಿಂದ ಕರ್ನಾಟಕ ಗ್ರಂಥಾಲಯ ಪ್ರಾಧಿಕಾರಕ್ಕೆ ಒಬ್ಬ ವಿಧಾನಸಭೆ ಸದಸ್ಯರನ್ನು ನಾಮನಿರ್ದೇಶನ ಮಾಡಲು ಈ ಸದನವು ಮಾನ್ಯ ಸಭಾಧ್ಯಕ್ಷರಿಗೆ ಅಧಿಕಾರವನ್ನು ನೀಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಮಾನ್ಯ ಸಚಿವರು ಮಂಡಿಸಿರುವ ಪ್ರಸ್ತಾವಕ್ಕೆ ಸದನದ ಸಹಮತಿ ಇದೆ ಎಂದು ಭಾವಿಸುತ್ತೇನೆ. ಮಾನ್ಯ ಉದಾಸಿಯವರೆ, ನಿಮ್ಮ ಬಿಲ್‌ನ್ನು ಮಂಡನೆ ಮಾಡಿ.

2. ಶಾಸನ ರಚನೆ.

ಕರ್ನಾಟಕ ಪಂಚಾಯತ್‌ರಾಜ್ (ತಿದ್ದುಪಡಿ) ವಿಧೇಯಕ 2006 (ಮಂಡನೆಗೆ ವಿರೋಧ ವ್ಯಕ್ತಪಡಿಸಲಾಯಿತು)

ಶ್ರೀ ಸಿ.ಎಂ. ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ಮಾನ್ಯ ಅಧ್ಯಕ್ಷರೆ, ಕರ್ನಾಟಕ ಪಂಚಾಯತ್ ರಾಜ್ ವಿಧೇಯಕ –2006.....

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಆಬ್ಜಕ್ಟೀವ್ಸ್‌ನಲ್ಲಿ ಇವರು ಏನು ಹೇಳುತ್ತಾರೆಂದರೆ, ತಾಲ್ಲೂಕು ಪಂಚಾಯಿತಿಗಳದ್ದು, ಆಡಿಟ್ ಆಗುವುದು ಲೇಟಾಗುತ್ತಿದೆ ಅದಕ್ಕಾಗಿ ಆ ವ್ಯಾಪ್ತಿಯನ್ನು ತೆಗೆದುಬಿಟ್ಟು ಜಿಲ್ಲಾ ಪಂಚಾಯಿತಿಗೆ ಸೀಮಿತ ಮಾಡಿ ಬಿಡಿ